## 28. ನಿಯಮಾವಳಿ ಪರಿಶೀಲನಾ ಸಮಿತಿ ರಚನೆ

ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳನ್ನು ಪರಿಶೀಲಿಸುವುದಕ್ಕಾಗಿ ಶೀಘ್ರವೇ ಸಮಿತಿ ರಚಿಸಲಾಗುವುದು ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಹೇಳಿದ್ದಾರೆ.

ನಿಯಮಾವಳಿ ಸಮಿತಿ ರಚಿಸಲು ವಿಧಾನ ಸಭಾಧ್ಯಕ್ಷರಿಗೆ ಸದನ ಅಧಿಕಾರ ನೀಡಿದೆ. ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರ ನೇಮಕ ಹಾಗೂ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳನ್ನು ಪರಿಶೀಲಿಸಿ ತಿದ್ದುಪಡಿಗಳಿಗೆ ಶಿಫಾರಸ್ಸು ಮಾಡುವುದು ಸಮಿತಿ ಮುಖ್ಯ ಉದ್ದೇಶವಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಕಾರ್ಯಶೈಲಿ ಹಾಗೂ ನಡವಳಿಕೆಯ ಹಲವು ನಿಯಮಗಳ ಬಗ್ಗೆ ಸದನದ ಒಳಗೆ–ಹೊರಗೆ ಅನೇಕ ಬಾರಿ ಚರ್ಚೆಗಳಾಗಿವೆ. ಈ ಹಿನ್ನೆಲೆಯಲ್ಲಿ ಪರಿಶೀಲನೆ ವೇಳೆ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದು ತಿಳಿಸಿದರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪರಿಶೀಲನಾ ಸಮಿತಿ ರಚಿಸಲಾಗುವುದು. ಸಮಿತಿ ಸ್ವರೂಪ, ಕಾರ್ಯಯೋಜನೆಯನ್ನು ಆದಷ್ಟು ಬೇಗ ಅಂತಿಮಗೊಳಿಸಿ, ಅಧಿಕೃತ ವಿವರ ಇಷ್ಟರಲ್ಲೇ ನೀಡುವೆ ಎಂದು ಕಾಗೇರಿ ಹೇಳಿದರು.

ಕೊರೋನಾ ಆತಂಕದ ನಡುವೆಯೂ 15ನೇ ವಿಧಾನ ಸಭೆಯ 7ನೇ ಅಧಿವೇಶನವು ಎಲ್ಲರ ಸಹಕಾರದಿಂದ ಫಲಪ್ರದವಾಗಿದೆ. ಕಲಾಪ ಸಲಹಾ ಸಮಿತಿ ಸಭೆ ಒಮ್ಮತದ ತೀರ್ಮಾನದಂತೆ 8 ದಿನಗಳಿಂದ 6 ದಿನಗಳಿಗೆ ಅಧಿವೇಶನದ ಅವಧಿ ಇಳಿಸಲಾಯಿತು. ಒಟ್ಟು 40 ಗಂಟೆ ಕಲಾಪ ನಡೆದಿದೆ. ಧನ ವಿನಿಯೋಗ, ಭೂ ಸುಧಾರಣೆ, ಎಪಿಎಂಸಿ ತಿದ್ದುಪಡಿ ಸೇರಿ 36 ವಿಧೇಯಕಗಳು ಅಂಗೀಕಾರವಾಗಿವೆ. ರಾಜ್ಯ ವಿವಿಗಳು ಮತ್ತು ಕೆಲವು ಇತರ ಕಾನೂನುಗಳ ಬಿಲ್ ಬಗ್ಗೆ ಚರ್ಚಿಸಿದ ಬಳಿಕ ತಡೆ ಹಿಡಿಯಲಾಗಿದೆ ಎಂದು ಹೇಳಿದರು.

ಅನುಮೋದನೆಗೆ ಮುನ್ನ ಮಸೂದೆಗಳ ಮೇಲೆ 14 ಗಂಟೆ 22 ನಿಮಿಷ ಚರ್ಚೆಯಾಗಿದೆ. ಸಮಿತಿಗಳ 6 ವರದಿಗಳು ಜಂಟಿ ಪರಿಶೀಲನಾ ಸಮಿತಿಯ ವಿಶೇಷ ವರದಿ, 57 ಅಧಿಸೂಚನೆಗಳು, 19 ಅಧ್ಯಾದೇಶಗಳು, 62 ವಾರ್ಷಿಕ ವರದಿಗಳು, 69 ಲೆಕ್ಕ ಪರಿಶೋಧನಾ ವರದಿ, ತಲಾ 1 ಅನುಷ್ಠಾನ, ಅನುಪಾಲನಾ ವರದಿ ಹಾಗೂ 3 ವಿಶೇಷ ವರದಿ ಮಂಡನೆಯಾಗಿವೆ ಎಂದು ತಿಳಿಸಿದರು. ಸದನದಲ್ಲಿ ಸ್ವೀಕರಿಸಿದ್ದ 3,071 ಪ್ರಶ್ನೆಗಳ ಪೈಕಿ 1,109 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ ಎಂದು ವಿಶ್ವೇಶ್ವರ ಹೆಗಡೆ, ಕಾಗೇರಿ ವಿವರ ನೀಡಿದರು.

ಆಧಾರ:ವಿಜಯವಾಣಿ,ದಿನಾಂಕ:29.09.2020